ರೇಸ್ ಕೋರ್ಸ್ ಜಾಗದಲ್ಲಿ ಮೂರಾಟ ಸಂಕೀರ್ಣ.

೩೭೯. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, (ಅಥಣಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನಲ್ಲಿರುವ ರೇಸ್ ಕೋರ್ಸನ್ನು ಸ್ಥಳಾಂತರಿಸಲು ಸರ್ಕಾರದವರು ತೀರ್ಮಾನ ಕೈಗೊಂಡಿರುವರೆ.

ಆ) ಹಾಗಿದ್ದಲ್ಲಿ ಯಾವ ಸ್ಥಳಕ್ಕೆ ವರ್ಗಾಯಿಸಲಾಗುವುದು.

ಇ) ಈಗ ರೇಸ್‌ಕೋರ್ಸ್ ಇರುವ ಜಾಗವನ್ನು ಜನೋಪಯೋಗಿ ಕಾರ್ಯಕ್ಕೆ ಬಳಸಲಾಗುವುದ, ಅಥವಾ ದಹಿಲಿಯಲ್ಲಿರುವಂತೆ ಮೂರಾಟ ಸಂಕೀರ್ಣ ರಚಿಸಲಾಗುವುದೇ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ಹೌದು.

ಆ) ಜಕ್ಕೂರು ಗ್ರಾಮದಲ್ಲಿ ಲಭ್ಯವಿರುವ ಸರ್ಕಾರಿ ಜಮೀನಿಗೆ.

ಇ) ಮಕ್ಕಳ ಮನರಂಜನೆ ಸಲುವಾಗಿ ಉಪಯೋಗಿಸಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿ ದರೋಡೆ ಪ್ರಕರಣಗಳ ಬಗ್ಗೆ.

೫೪೦. ಶ್ರೀ ಜಿ. ರಾಜಗೌಡ, (ಹನೂರು).—ಮಾನ್ಯ ಗೃಹ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ೧೯೮೭ರ ಜನವರಿಯಿಂದ ಡಿಸೆಂಬರ್ ಅಂತ್ಯದವರೆವಿಗೆ ನಡೆದಿರುವ ದರೋಡೆ ಪ್ರಕರಣಗಳೆಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು).

ಆ) ಇವುಗಳಲ್ಲಿ ಎಷ್ಟು ಜನ ಸತ್ತಿದ್ದಾರೆ.

ಇ) ಎಷ್ಟು ಅಪರಾಧಿಗಳನ್ನು ಸೆರೆ ಹಿಡಿಯಲಾಗಿದೆ ಮತ್ತು ಶಿಕ್ಷೆ ಕೊಡಲಾಗಿದೆ?

ಈ) ಎಷ್ಟು ಪ್ರಕರಣಗಳಲ್ಲಿ ಈ ಬಗ್ಗೆ ಸಾರ್ವಜನಿಕರಿಗೆ ಹಾಗೂ ಪೊಲೀಸರಿಗೆ ಪುರಸ್ಕಾರ ನೀಡಲಾಗಿದೆ.

ಉ) ದರೋಡೆಗಳನ್ನು ತಡೆಯಲು ಪೊಲೀಸ್ ದಳವನ್ನು ಹೆಚ್ಚಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಆರ್. ಎಲ್ ಜಾಲಪ್ಪ (ಮಾನ್ಯ ಗೃಹ ಸಚಿವರು) —

ಅ) ೧೬೭ ದರೋಡೆ ಪ್ರಕರಣಗಳು ವರದಿಯಾಗಿವೆ. ಜಿಲ್ಲಾವಾರು ಮಾಹಿತಿ ಕೆಳಕಂಡಂತಿದೆ.

	ಜಿಲ್ಲೆ	ಪ್ರಕರಣಗಳ ಸಂಖ್ಯೆ
೧.	ಬೆಂಗಳೂರು ನಗರ	೧೩
೨.	ಬೆಂಗಳೂರು ಜಿಲ್ಲೆ	೧೪
೩.	ತುಮಕೂರು	೧೩
೪.	ಕೋಲಾರ	೧೨
೫.	ಕೆ.ಜಿ.ಎಫ	೩
೬.	ಮೈಸೂರು	೭
೭.	ಮಂಡ್ಯ	೪
೮.	ಹಾಸನ	೭
೯.	ಶಿವಮೊಗ್ಗ	೧
೧೦.	ಕೊಡಗು	...
೧೧.	ಬಳ್ಳಾರಿ	೫
೧೨.	ಚಿತ್ರದುರ್ಗ	೧೫
೧೩.	ಚಿಕ್ಕಮಗಳೂರು	೩
೧೪.	ಕಾರವಾರ	೩
೧೫.	ಬೆಳಗಾಂ	೧೨
೧೬.	ಬಿಜಾಪುರ	೧೭
೧೭.	ಧಾರವಾಡ	೧೭
೧೮.	ಗುಲ್ಬರ್ಗಾ	೧೧
೧೯.	ಬೀದರ್	೫
೨೦.	ರಾಯಚೂರು	೩
೨೧.	ರೈಲ್ವೆ	೨
	ಒಟ್ಟು	೧೬೭

ಆ) ೩ ಜನರು ಸಾವಿಗೀಡಾಗಿದ್ದಾರೆ.

ಇ) ೩೬೫ ಜನರನ್ನು ದಸ್ತಗಿರಿ ಮಾಡಲಾಗಿದೆ. ಈ ದರೋಡೆ ಪ್ರಕರಣಗಳಲ್ಲಿ ಇನ್ನೂ ತಪಾಸಣೆಯಲ್ಲಿದ್ದು ಅಥವಾ ಪೊಲೀಸ್ ತಪಾಸಣೆಯಾಗಿ ನ್ಯಾಯಾಲಯದ ವಿಚಾರಣೆಯಲ್ಲಿದ್ದು ಯಾವುದು ಸಹ ಶಿಕ್ಷೆಯಲ್ಲಿ ಇನ್ನೂ ಅಂತಿಮಗೊಂಡಿಲ್ಲ.

ಈ) ೬ ಪೊಲೀಸ್ ಅಧಿಕಾರಿಗಳಿಗೆ ಪದಕಗಳನ್ನು ಕೊಡಲಾಗಿದೆ. ಇತರ ಪ್ರಕರಣಗಳನ್ನು ಪರಿಶೀಲಿಸಲಾಗುತ್ತಿದೆ.

ಉ) ವೃತ್ತಿ ನಿರತ ದರೋಡೆಕೋರರ ತಂಡದವರು ಅಲ್ಲಲ್ಲಿ ಕಾರ್ಯಾಚರಣೆಯನ್ನು ನಡೆಸಿರುವುದನ್ನು ಮೋಡಿದರೆ ಅವರು ಪೊಲೀಸರ ಸಂಖ್ಯೆ ಹೆಚ್ಚಿಲ್ಲದೆ ಹೊರಗಡೆ ಯಲ್ಲಿರುವ ಅಪರಾಧಕ್ಕೆ ಸುಲಭವಾಗಿ ತಂಕ್ಕಾಗಬಹುದಾದ ಮನೆಗಳನ್ನೇ ಆರಿಸಿ ತಮ್ಮ ಕಾರ್ಯಾಚರಣೆಯನ್ನು ನಡೆಸಂತ್ತಿದ್ದಾರೆ. ಹೀಗಿರುವಲ್ಲಿ ರಾಜ್ಯದ ಎಲ್ಲೆಡೆಯಲ್ಲೂ ಭದ್ರತೆ ವ್ಯವಸ್ಥೆಯನ್ನು ಮಾಡಬೇಕಾದರೆ ಇಡೀ ಪೊಲೀಸ್ ಇಲಾಖೆಯ ಸಂಖ್ಯಾಬಲವನ್ನೇ ಹೆಚ್ಚಿಸಬೇಕಾಗುತ್ತದೆ. ಹೆಲವು ಪ್ರದೇಶಗಳಿಗೆ ಅಧಿಕ ಸಂಖ್ಯೆಯ ಪೊಲೀಸ್ ಸಿಬ್ಬಂದಿಯನ್ನು ಮಂಜೂರು ಮಾಡಲಾಗಿದೆ. ಬೇರೆ ಪ್ರದೇಶಗಳಿಗೂ ಸಹ ಮಂಜೂರಾತಿ ಕೊಡುವ ಯೋಜನೆ ಇದೆ. ಹಾಗೆಯೇ ದರೋಡೆಗಳನ್ನು ಹೆಚ್ಚು ಪರಿಶ್ರಮದಿಂದ

ಪತ್ತೆಹಚ್ಚಲು ರಾಜ್ಯಮಟ್ಟದಲ್ಲಿ ಒಂದು ದರೋಡೆತಪಾಸಣೆ ತಂಡವನ್ನು ನೇಮಿಸುವ ಪ್ರಸ್ತಾವನೆಯೂ ಸಹ ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯಕ್ಕೆ ಸೀಮೆಎಣ್ಣೆ ಮತ್ತು ಡೀಸಲ್ ಅವಶ್ಯಕತೆ.

೫೨೫. ಶ್ರೀ ಜಿ. ರಾಜಂಗೌಡ (ಹನೂರು).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ತಿಂಗಳೊಂದಕ್ಕೆ ಬೇಕಾಗಿರುವ ಸೀಮೆಎಣ್ಣೆ ಹಾಗೂ ಡೀಸಲ್‌ನ ಪ್ರಮಾಣ ಎಷ್ಟು?

ಆ) ಇದನ್ನು ಯಾವ ಯಾವ ಸಂಸ್ಥೆ ಎಷ್ಟೆಷ್ಟು ಪೂರೈಸುತ್ತಿವೆ?

ಇ) ಇದರಿಂದ ಸರ್ಕಾರಕ್ಕೆ ಆಗುವ ಲಾಭ ನಷ್ಟವೆಷ್ಟು?

ಶ್ರೀ ಬಸವರಾಜ ಪಾಟೀಲ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು).—

ಅ) ನಮ್ಮ ರಾಜ್ಯಕ್ಕೆ ೪೬,೫೦೦ ಕೆ.ಎಲ್. ಸೀಮೆಎಣ್ಣೆ ಹಾಗೂ ೮೭,೦೦೦ ಕೆ.ಎಲ್. ಡೀಸಲ್ ತಿಂಗಳೊಂದಕ್ಕೆ ಬೇಕಾಗಿರುತ್ತದೆ.

ಆ) ಕೇಂದ್ರ ಸರ್ಕಾರವು ಹಾಲಿ ಳಳ.೦೫೦ ಕೆ.ಎಲ್. ಸೀಮೆಎಣ್ಣೆಯನ್ನು ಹಾಗೂ ಡೀಸಲ್‌ನ ಪೂರ್ಣ ಬೇಡಿಕೆಯನ್ನು ಅವರ ಸಾಮ್ಯಕ್ಕೆ ಒಳಪಟ್ಟು ಐ.ಒ.ಸಿ., ಬಿ.ಪಿ.ಸಿ., ಹೆಚ್.ಪಿ.ಸಿ., ಮತ್ತು ಐ.ಬಿ.ಪಿ. ಆಯಿಲ್ ಕಂಪೆನಿಗಳು ಶೇಕಡಾವಾರು ಕ್ರಮವಾಗಿ ೬೧, ೧೩, ೨೪ ರಂತೆ ೨ರ ಪ್ರಮಾಣದಲ್ಲಿ ಪೂರೈಸುತ್ತಿವೆ.

ಇ) ಸೀಮೆಎಣ್ಣೆ ಮತ್ತು ಡೀಸಲ್ ವ್ಯವಹಾರಗಳು ನೇರವಾಗಿ ಕೇಂದ್ರದ ಸಾಮ್ಯಕ್ಕೆ ಒಳಪಟ್ಟಿರುವುದರಿಂದ ರಾಜ್ಯ ಸರ್ಕಾರಕ್ಕೆ ಯಾವ ರೀತಿಯ ಲಾಭ ಅಥವಾ ನಷ್ಟ ಉಂಟಾಗುವ ಸಂಭವವಿಲ್ಲ.

ಮಕ್ಕಳ ಮರಣ ತಡೆಯುವುದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳು.

೫೩೯. ಶ್ರೀ ಜಿ. ರಾಜಂ ಗೌಡ, (ಹನೂರು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿ ಸಾವಿರ ಮಕ್ಕಳಿಗೆ ಎಷ್ಟು ಮಕ್ಕಳು ಮರಣ ಹೊಂದುತ್ತಿದ್ದಾರೆ ?

ಆ) ಇದನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು) —

ಅ) ೭೦.

ಆ) ರಾಜ್ಯದಲ್ಲಿ ಮಕ್ಕಳ ಉಳಿವು ಮಂತ್ರ, ಬೆಳವಣಿಗೆಗಾಗಿ ಪ್ರಸವ ಪೂರ್ವ ಆರೈಕೆ ಹೆರಿಗ ಮಾಡುವ ಸೇವೆಗಳು, ಪ್ರಸವೋತ್ತರ ಆರೈಕೆ, ಸಾಂಕ್ರಾಮಿಕ ಜಾಡ್ಯಗಳ ವಿರುದ್ಧ ಲಸಿಕೆ ನೀಡಂಎಕೆ. ಮೌಖಿಕ ಪುನರ್ಜಲೀಕರಣ ಉಪಚಾರ, ರಕ್ತಹೀನತೆಯನ್ನು ತಡೆಗಟ್ಟುವುದಕ್ಕೆ ಪ್ರತಿಬಂಧಕ ಉಪಚಾರ ಗಳನ್ನು ಮಾಡಲಾಗುತ್ತಿದೆ.

ನಗರ ಪ್ರದೇಶಗಳಿಗೆ ಹಸಿರು ಕಾರ್ಡು.

೬೬೭. ಶ್ರೀ ಜ್ಞಾನದೇವ ದೊಡ್ಡ ಮೇಟಿ, (ರೋಣ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ೨೧,೦೦೦ಕ್ಕೂ ಮಿಗಾರದ ಸಣ್ಣ ನಗರ ಪ್ರದೇಶಗಳಿಗೆ ಪಡಿತರ ಸಲುವಾಗಿ ಹಸಿರು ಕಾರ್ಡು ಕೊಡುವ ವಿಚಾರ ಸರ್ಕಾರದವರ ಗಮನದಲ್ಲಿ ಇದೆಯೇ ?